ಸಾಕ್ಷಿ ಯನ್ನು ದಿಃ 05.11.2025 ರಂದು  ಪುನಃ ಕರೆಸಿ ಪ್ರಮಾಣ ವಚನ ಬೋಧಿಸಲಾಯಿತು.

**ಮುಂದುವರಿದ ಪಾಟೀ ಸವಾಲುಃ  ಆರೋಪಿ ಪರ ವಕೀಲರಿಂದ**

1. ನಾನು ಈಗ ಮೈಸೂರಿನಲ್ಲಿ ವಾಸವಿದ್ದೇನೆ.
2. ನನ್ನ ಸ್ವಂತ ಊರು ದೊಡ್ಡ ಕಮರವಳ್ಳಿ
3. ನಾನು ಮೈಸೂರಿನಲ್ಲಿ 1 ವರ್ಷದಿಂದ ನೆಲೆಸಿದ್ದೇನೆ.
4. ಆರೋಪಿ ನನಗೆ ನನ್ನ ಅಣ್ಣನ ಮಗ ಮನು ರವರ ಕಡೆಯಿಂದ ಪರಿಚಯ.
5. ಆರೋಪಿ 2014 ಕ್ಕಿಂತ 3-4 ವರ್ಷಕ್ಕಿಂತ ಮುಂಚೆ ಪರಿಚಯವಾಗಿದ್ದರು.
6. ನಾನು ಆರೋಪಿಗೆ ಬಡ್ಡಿಗೆ ಹಣ ನೀಡಿರುವುದಿಲ್ಲ.
7. ಹಣ ನೀಡುವ ಸಮಯದಲ್ಲಿ ಆರೋಪಿಯಿಂದ ಯಾವುದೇ ದಾಖಲೆ ಪಡೆದಿಲ್ಲ.
8. 2014 ರಲ್ಲಿ 6 ಲಕ್ಷ ಹಣ ದೊಡ್ಡ ಮೊತ್ತ ಎಂದರೆ ಸರಿ.
9. ಆರೋಪಿಗೆ ಹಣ ನೀಡಿದ ಸಮಯದಲ್ಲಿ ಚೆಕ್ ಹಾಗೂ ಪ್ರೋನೋಟ್ ಪಡೆದುಕೊಳ್ಳಲು ತೊಂದರೆ ಇರಲಿಲ್ಲ ಎಂದರೆ ಸರಿ.
10. ಪರಿಚಯವಾಗಿದ 3-4 ವರ್ಷದಲ್ಲಿ 6 ಲಕ್ಷ ಹಣ ನೀಡುವಷ್ಟು ನಂಬಿಕೆ ಇತ್ತಾ ಎಂದರೆ, ಮುಂದೆ ಸಹಾಯವಾಗಬಹುದು ಎಂದು ಹಣ ನೀಡಿದ್ದೆ ಎಂದು ನುಡಿಯುತ್ತಾರೆ.
11. ಆರೋಪಿಗೆ ಹೊರತುಪಡಿಸಿ ಬೇರೆ ಯಾರಿಗೂ ನಾನು ಸಾಲ ನೀಡಿಲ್ಲ.
12. ನನಗೆ ಒಬ್ಬಳೇ ಮಗಳು. ಅವರು ಅರೆಕಾಲಿಕ ಪ್ರೊಫೇಸರ್ ಆಗಿದ್ದಾರೆ. ಆಕೆಗೆ ಮದುವೆಯಾಗಿರುತ್ತದೆ. ನನ್ನ ಅಳಿಯ ಮೈಸೂರಿನಲ್ಲಿ ವಕೀಲರಾಗಿದ್ದಾರೆ.
13. ನಾನು ಆರೋಪಿಗೆ 6 ಲಕ್ಷ ಹಣ ನೀಡಿದ್ದು ನನ್ನ ಮಗಳಿಗೆ ಗೊತ್ತಿತ್ತು.
14. ನಿಮ್ಮ ಮನೆಯ ವ್ಯವಹಾರ ನಿಮ್ಮ ಮಗಳು ನೋಡಿಕೊಳ್ಳುತ್ತಾರೆ ಎಂದರೆ, ಈಗ ಅವರು ನೋಡಿಕೊಳ್ಳುತ್ತಾರೆ ಆದರೆ ಮೊದಲು ನಾನು ನೋಡಿಕೊಳ್ಳುತ್ತಿದ್ದೆ ಎಂದು ನುಡಿಯುತ್ತಾರೆ.
15. ನಿಮ್ಮ ಮಗಳನ್ನು ಕೇಳದೇ ನೀವು ಯಾವುದೇ ವ್ಯವಹಾರ ಮಾಡುವುದಿಲ್ಲ ಎಂದರೆ ಅವರೂ ಸಹ ಹಣ ನೀಡಲು ಹೇಳಿದ್ದರು ಎಂದು ನುಡಿಯುತ್ತಾರೆ.
16. ಆರೋಪಿಯಿಂದ ಚೆಕ್ಕನ್ನು ಬೈಲಕುಪ್ಪೆ ಪೊಲೀಸ್ ಠಾಣೆಯಲ್ಲಿ ದಿಃ 09.05.2019 ರಂದು ಪಡೆದಿದ್ದೆ. ಆರೋಪಿಗೆ 2014 ರಲ್ಲಿ ಡಿಸೆಂಬರ್ ಕೊನೆ ವಾರದಲ್ಲಿ ಹಣ ನೀಡಿದ್ದೆ.

ಶುಂಠಿ, ಜೋಳ ಹಾಗೂ ಭತ್ತ ಮಾರಿದ ಹಣವನ್ನು ನೀಡಿದ್ದೆ. ಮಾರಿದ ಬಗ್ಗೆ ರಶೀದಿ ಇಲ್ಲ.

17. ಆರೋಪಿ ಫೈನಾನ್ಸ ವ್ಯವಹಾರ ಮಾಡುತ್ತಿದ್ದರು ಹಾಗೂ ಅದರಲ್ಲಿ ನಷ್ಟವಾಗಿ ಮನೆಯಲ್ಲಿ ತೊಂದರೆ ಆಗಿದೆ ಎಂದು ಹಣ ಕೇಳಿದ್ದರು.

18. ನೀವು ಯಾವುದೇ ಪರವಾನಿಗೆ ಇಲ್ಲದೇ ಬಡ್ಡಿ ವ್ಯವಹಾರ ಮಾಡುತ್ತಿದ್ದೀರಿ ಎಂದರೆ ಸರಿಯಲ್ಲ. ನಿಮ್ಮ ಬಳಿ ಬಡ್ಡಿಗೆ ಹಣ ಕೊಡಿಸಲು ಆರೋಪಿ ಜನರನ್ನು ಕರೆದುಕೊಂಡು ಬರುತ್ತಿದ್ದರು ಎಂದರೆ ಸರಿಯಲ್ಲ. ನೀವು ಆರೋಪಿಯಿಂದ ಭದ್ರತೆಗೆ ಚೆಕ್ ಪಡೆದು ಜನರಿಗೆ ಹಣ ನೀಡುತ್ತಿದ್ದೀರಿ ಎಂದರೆ ಸರಿಯಲ್ಲ. ಬಂದ ಲಾಭದಲ್ಲಿ 1 ಪ್ರತಿಶತ ಹಣವನ್ನು ಆರೋಪಿಗೆ ನೀಡುತ್ತಿದ್ದೀರಿ ಎಂದರೆ ಸರಿಯಲ್ಲ.

19. ಬೈಲಕುಪ್ಪೆ ಠಾಣೆಯಲ್ಲಿ ಚೆಕ್ ಪಡೆದ ಸಮಯದಲ್ಲಿ ಬರವಣಿಗೆ ಆಗಿತ್ತು. ಸದರಿ ಬರವಣಿಗೆಯನ್ನು ಹಾಜರುಪಡಿಸಿದ್ದೇನೆ.

20. 2014 ರಿಂದ 2019 ರ ವರೆಗೆ ನೀವು ಹಣ ವಾಪಸ್ ಕೇಳಿಲ್ಲವಾ ಎಂದರೆ, ಅವರು ಸಿಗುತ್ತಿರಲಿಲ್ಲ ಎಂದು ನುಡಿಯುತ್ತಾರೆ. ಆ ಬಗ್ಗೆ ದೂರು ನೀಡಿದ್ದಿರಾ ಎಂದರೆ ಇಲ್ಲ, ಅವರೇ ದೂರು ನೀಡಿದ್ದರು.

21. 2014 ರಲ್ಲಿ ಹಣ ನೀಡಿದಾಗ ಒಂದು ವರ್ಷ ಬಿಟ್ಟು ಹಣ ವಾಪಸ್ ನೀಡುತ್ತೇನೆ ಎಂದು ಬಾಯಿ ಮಾತಲ್ಲಿ ಹೇಳಿದ್ದರು. ಒಂದು ವರ್ಷವಾದ ನಂತರ ದೂರು ನೀಡಲು ತೊಂದರೆ ಇತ್ತಾ ಎಂದರೆ, ಅವರನ್ನು ಹುಡುಕಿದರೂ ಸಿಗುತ್ತಿರಲಿಲ್ಲ ಎಂದು ನುಡಿಯುತ್ತಾರೆ.

22. ಆರೋಪಿಯ ವಿಳಾಸ ನನಗೆ ಗೊತ್ತು. ಹೆಚ್.ಬಿ.ಶಿವಸ್ವಾಮಿ, ಕೊಪ್ಪ ಗ್ರಾಮ, ಪಿರಿಯಾಪಟ್ಟಣ ತಾಲೂಕು, ಮೈಸೂರು ಜಿಲ್ಲೆ.

23. ಆರೋಪಿ ನಿಮ್ಮ ಬಳಿ ಹಣ ಕೊಡಿಸಿದ್ದ ಜನರು ಕೋವಿಡ್ ಸಮಯದಲ್ಲಿ ಬಡ್ಡಿ ಹಣ ನೀಡದ ಕಾರಣ ನಿಮ್ಮ ಅಳಿಯ ಹಾಗೂ ಸಂಬಂಧಿಕರು ಆರೋಪಿ ಮನೆ ಬಳಿ ಗಲಾಟೆ ಮಾಡಿದ್ದರು ಎಂದರೆ ಸರಿಯಲ್ಲ.

24. ಆರೋಪಿ ನಿಮ್ಮಿಂದ ಯಾವುದೇ ಹಣ ಪಡೆದಿಲ್ಲದಿದ್ದರೂ ನಿಮ್ಮ ಬಳಿ ಇದ್ದ ಭದ್ರತೆಗಾಗಿ ಪಡೆದ ಚೆಕ್ಕನ್ನು ದುರುಪಯೋಗಪಡಿಸಿಕೊಂಡು ಸುಳ್ಳು ಸಾಕ್ಷಿ ನುಡಿಯುತ್ತಿದ್ದೀರಿ ಎಂದರೆ ಸರಿಯಲ್ಲ.

25. ಆರೋಪಿಯು ನಿಮಗೆ ಪೊಲೀಸ್ ಠಾಣೆಯಲ್ಲಿ ಚೆಕ್ ನೀಡಿಲ್ಲ ಎಂದರೆ ಸರಿಯಲ್ಲ. ಆ ಬಗ್ಗೆ ನೀವು ಯಾವುದೇ ದಾಖಲೆ ನೀಡಿಲ್ಲ ಎಂದರೆ ಸರಿಯಲ್ಲ.
26. ಆರೋಪಿಗೆ ನೀವು ಯಾವುದೇ ಹಣ ನೀಡದಿದ್ದರೂ ಅವರಿಗೆ ತೊಂದರೆಯಾಗಲಿ ಎಂದು ಸುಳ್ಳು ಸಾಕ್ಷಿ ನುಡಿಯುತ್ತಿದ್ದೀರಿ ಎಂದರೆ ಸರಿಯಲ್ಲ.

**ಮರುವಿಚಾರಣೆಃ ಇಲ್ಲ**

(ತೆರೆದ ನ್ಯಾಯಾಲಯದಲ್ಲಿ ಸಾಕ್ಷಿಯು ಹೇಳಿದಂತೆ ನನ್ನ ಉಕ್ತಲೇಖದಂತೆ ಬೆರಳಚ್ಚು ಮಾಡಲಾಯಿತು.)

ಓ ಹೇ ಕೇ ಸ ಇ ಒ

ಪ್ರಧಾನ ಸಿವಿಲ್ ನ್ಯಾಯಾಧೀಶರು ಮತ್ತು
ಜೆ.ಎಂ.ಎಫ್.ಸಿ., ಪಿರಿಯಾಪಟ್ಟಣ